ಯಾವುದೇ ಕ್ರಮ ಆಗಿಲ್ಲ. ನಾವು ಇವತ್ತು ಮಾರ್ಚ್ 19ರಲ್ಲಿ ಇದ್ದೇವೆ. ಸರ್ಕಾರ ಲೋಕಾಯುಕ್ತ ಎನ್ನುವಂತಹ ಒಂದು ಸಂಸ್ಥೆಯನ್ನು ಇಟ್ಟುಕೊಂಡು ಲಂಚವನ್ನು ಸ್ವೀಕರಿಸುತ್ತಿರುವಂತಹ ಒಬ್ಬ ಅಧಿಕಾರಿಯನ್ನು ಹಿಡಿದು ಒಂದೂವರೆ ತಿಂಗಳಾದರೂ ನಾವು ಕ್ರಮ ತೆಗೆದುಕೊಳ್ಳಲಿಲ್ಲ ಅಂದರೆ ಹೇಗೆ? ನಮಗೆ ಮತ್ತು ಜನರಿಗೆ ಜನ ಪ್ರತಿನಿಧಿಗಳಿಗೆ ಈ ವ್ಯವಸ್ಥೆಯ ಮೇಲೆ ಯಾವ ರೀತಿ ವಿಶ್ವಾಸ ಬರುವುದಕ್ಕೆ ಸಾಧ್ಯವಿದೆ? ಈ ಸಂದರ್ಭದಲ್ಲಿ ನಾನು ಸರ್ಕಾರರನ್ನು ಆಗ್ರಹಪಡಿಸುತ್ತಿದ್ದೇನೆ, ನಗರಸಭೆಯ ಸದಸ್ಯರು ತೀವ್ರ ಪ್ರತಿಭಟನೆಯನ್ನು ಮಾಡುತ್ತಿದ್ದಾರೆ. ತೀವ್ರ ವಿರೋಧವನ್ನು ಮಾಡುತ್ತಿದ್ದಾರೆ. ಇಂತಹ ಆಯುಕ್ತರನ್ನು ನಾವು ಇಟ್ಟುಕೊಳ್ಳುವುದಕ್ಕೆ ಸಿದ್ದರಿಲ್ಲ ಎಂದು ಹೇಳುತ್ತಿದ್ದಾರೆ. ಅದ್ದರಿಂದ ತಕ್ಷಣ ಅವರನ್ನು ಕೆಲಸದಿಂದ ಸಸ್ಪೆಂಡ್ ಮಾಡುವಂತಹ ಕೆಲಸವನ್ನು ಸರ್ಕಾರ ಮಾಡುತ್ತದೆಯೇ?

ಅರಕಲಗೂಡು ಕ್ಷೇತ್ರದಲ್ಲಿ ಹೆರಿಗೆ ಆಸ್ಪತ್ರೆ

ಶ್ರೀ ಎ.ಟಿ. ರಾಮಸ್ವಾಮಿ (ಅರಕಲಗೂಡು):- ಮಾನ್ಯ ಅಧ್ಯಕ್ಷರು, ನಮ್ಮ ಅರಕಲಗೂಡು ಕ್ಷೇತ್ರದ ಬಸವಪಟ್ಟಣ ಗ್ರಾಮದಲ್ಲಿ ಸುಮಾರು 5 ವರ್ಷಗಳ ಹಿಂದೆ ಒಂದು ಹೆರಿಗೆ ಆಸ್ಪತ್ರೆ ಮಂಜೂರಾತಿ ಆಗಿದೆ. ಕಟ್ಟಡ ಪ್ರಾರಂಭವಾಗಿ ಒಂದೂವರೆ ವರ್ಷ ಆಯಿತು ನಾನು ಸಹ ತಮ್ಮಲ್ಲಿ ಹತ್ತಾರು ಬಾರಿ ಬಂದು ವಿನಂತಿ ಮಾಡಿಕೊಂಡಿದ್ದೇನೆ. ಇದುವರೆಗೂ ಕೂಡ ತಾವು ಪ್ರಾರಂಭ ಮಾಡಿಸಲಿಲ್ಲ. ವಿರೋಧಪಕ್ಷದ ಶಾಸಕರು ಇರುವ ಕಡೆ ಸರ್ಕಾರ ಎನಾದರೂ ತಾರತಮ್ಯ ಮಾಡುವುದಕ್ಕೆ ಪ್ರಾರಂಭ ಮಾಡಿದ್ದಾರಾ? ಇಲ್ಲದಿದ್ದರೆ ಯಾವಾಗ ಪ್ರಾರಂಭ ಮಾಡುತ್ತೀರಿ ಎಂದು ಖಚಿತವಾಗಿ ಹೇಳಿ.

ಡಾ. ಹೆಚ್. ಸಿ. ಮಹದೇವಪ್ಪ (ಆರೋಗ್ಯ ಸಚಿವರು):- ಮಾನ್ಯ ಅಧ್ಯಕ್ಷರೇ, ತಾರತಮ್ಯ ಮಾಡುವ ಪ್ರಶ್ನೆಇಲ್ಲ ಇದು ಆರೋಗ್ಯದ ವಿಚಾರ ಆಗಿರುವುದರಿಂದ. ಅದರ ಬಗ್ಗೆ ವಿವರವಾದ ವರದಿಯನ್ನು ತರಿಸಿಕೊಂಡು ಮಾಡಿಸುತ್ತೇವೆ.

ಶ್ರೀ ಎ.ಟಿ. ರಾಮಸ್ವಾಮಿ:- ನಾನು ಹತ್ತಾರು ಬಾರಿ ತಮ್ಮ ಬಳಿ ಬಂದು ವಿನಂತಿ ಮಾಡಿಕೊಂಡಿದ್ದೇನೆ.

ಶ್ರೀ ಹೆಚ್ ಸಿ ಮಹದೇವಪ್ಪ:- ನಾಳೆ ತರಿಸಿ ಹೇಳುತ್ತೇನೆ.

ಪುತ್ತೂರು ತಾಲ್ಲೂಕಿನಲ್ಲಿ ಮಂಗನ ಖಾಯಿಲೆ.

ಶ್ರೀ ಎಸ್. ಅಂಗಾರ (ಸುಳ್ಯ):- ಮಾನ್ಯ ಅಧ್ಯಕ್ಷರೇ, ಪುತ್ತೂರು ತಾಲ್ಲೂಕಿನ ಬಳಿನೆಲೆ ಮತ್ತು ಕೊಂಬಾರು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಹರಡುತ್ತಿರುವ ಮಂಗನ ಕಾಯಿಲೆ ಯಿಂದಾಗಿ ಜನರು ಭಯಭೀತರಾಗಿದ್ದು, ಅಲ್ಲದೇ ಆರೋಗ್ಯ ಇಲಾಖೆ ಕಡೆಯಿಂದ ಸರಿಯಾದ ಚಿಕಿತ್ಸೆ ಮತ್ತು ಔಷಧಿ ದೊರೆಯದೇ ಈಗಾಗಲೇ ಎರಡು ಜನ ಮೃತಪಟ್ಟಿರುತ್ತಾರೆ. ಸುಮಾರು 3 ತಿಂಗಳಿನಿಂದ ಈ ಮಂಗನ ಕಾಯಿಲೆ ಬಗ್ಗೆ ಪ್ರಚಾರವಾಗುತ್ತಿದೆ. ಆದರೆ ಮೊದಲಿಗೆ ವೈದ್ಯರು ಇದು ಒಂದು ವೈರಸ್ ಜ್ವರ ಎನ್ನುವಂತರ ವರದಿಯನ್ನು ಕೊಟ್ಟರು, ರಕ್ತವನ್ನು ಶಿವಮೊಗ್ಗ ಆಸ್ಪತ್ರೆಗೆ ಕಳುಹಿಸಿದಾಗ ಅವರು ಅದು ಯಾವ ಕಾಯಿಲೆ ಎಂದು ಧೃಡಪಡಿಸಲು ಸುಮಾರು ಒಂದೂವರೆ ತಿಂಗಳು ಸಮಯ ತೆಗೆದುಕೊಂಡರು. ಇದರಿಂದಾಗಿ ಆ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಜನರು ತುಂಬಾ ಭಯ ಭೀತರಾಗಿದ್ದಾರೆ ಎನ್ನುವ ವಿಚಾರವನ್ನು ಕೂಡ

ನಾನು ತಮ್ಮ ಮೂಲಕ ಮಾನ್ಯ ಆರೋಗ್ಯ ಸಚಿವರ ಗಮನಕ್ಕೆ ತರುತ್ತೇನೆ. ಈ ಎರಡೂ ಗ್ರಾಮಗಳಲ್ಲಿ ಮಧ್ಯಮ ವರ್ಗದ ಜನ ಮತ್ತು ಕೂಲಿಕಾರ್ಮಿಕರು ಇದ್ದಾರೆ. ಸರ್ಕಾರಿ ಆಸ್ಪತ್ರೆಯಲ್ಲಿ ಸರಿಯಾದ ಚಿಕಿತ್ಸೆ ಇಲ್ಲದೇ ಇರುವುದರಿಂದ ಅವರು ಖಾಸಗಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆಯನ್ನು ಪಡೆದುಕೊಂಡಿದ್ದಾರೆ. ಅಲ್ಲಿ ಅವರು ಹಣ ಕೊಡುವುದಕ್ಕೆ ತುಂಬಾ ತೊಂದರೆ ಆಗಿದೆ. ಜನ ಹಣಕ್ಕಾಗಿ ಬೇರೆ ಕಡೆ ಅಲೆದಾಡುವಂತಹ ಪರಿಸ್ಥಿತಿ ಬಂದಿದೆ. ಆದ್ದರಿಂದ ಮಾನ್ಯ ಆರೋಗ್ಯ ಸಚಿವರು ತಕ್ಷಣ ಸಂಬಂಧಪಟ್ಟ ಇಲಾಖಾ ಅಧಿಕಾರಿಗಳನ್ನು ಸ್ಥಳಕ್ಕೆ ಕಳುಹಿಸಿ ಹಿರಿಯ ವೈದ್ಯಾಧಿಕಾರಿಗಳಿಂದ ಚಿಕಿತ್ಸೆಯನ್ನು ಕೊಡಿಸುವಂಥಾದ್ದು, ಔಷಧಿಯನ್ನು ಕೊಡಿಸುವಂಥಾದ್ದು, ಇದು ಆಗಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು):– ಮಾನ್ಯ ಅಧ್ಯಕ್ಷರೇ, ಇದು ಸುಳ್ಯ ಮತ್ತು ಪುತ್ತೂರು ತಾಲ್ಲೂಕಿನಲ್ಲಿ ಕಳೆದ ಎರಡೂವರೆ ವರ್ಷಗಳಿಂದ ಆಗುತ್ತಾ ಉಂಟು. ಸುಳ್ಳ ತಾಲ್ಲೂಕು ಪಂಚಾಯತಿಯಲ್ಲಿ ಮತ್ತು ಪುತ್ತೂರು ತಾಲ್ಲೂಕು ಪಂಚಾಯತಿಯಲ್ಲಿ ವಿಶೇಷವಾಗಿ ಇದರ ಬಗ್ಗೆ ಚರ್ಚೆ ಆಗಿದೆ. ಅದಲ್ಲದೆ ಈ ಕೊಂಬಾರು ಎನ್ನುವಂತಹ ಪ್ರದೇಶ ಸುಳ್ಯ ಕೇಂದ್ರಕ್ಕೆ ತುಂಬಾ ದೂರವಿರುವಂಥಾದ್ದು, ಪುತ್ತೂರು ಕೇಂದ್ರಕ್ಕೂ ಸಹ ಸುಮಾರು 45 ಕಿಲೋಮೀಟರ್ ದೂರ ಇರುವಂಥಾದ್ದು, ಯಾವುದೇ ವ್ಯಕ್ತಿ ಈ ಮಂಗನ ಕಾಯಿಲೆಗೆ ತುತ್ತಾದರೆ ಸುಳ್ಯ ಆಸ್ಪತ್ರೆ ಅಥವಾ ಪುತ್ತೂರು ಆಸ್ಪತ್ರೆಗೆ ಬರುವುದಕ್ಕೆ ಆಗುತ್ತಿಲ್ಲ. ಸಂಪರ್ಕ ಮಾಡುವುದಕ್ಕೆ ಕಷ್ಟವಾಗುತ್ತದೆ. ಇದನ್ನು ನಾವು ಪ್ರತ್ಯೇಕ ಪ್ರತ್ಯೇಕವಾಗಿ ಹೇಳಿದರೂ ಕೂಡ ಸಂಬಂಧಪಟ್ಟ ಇಲಾಖೆಯವರಿಂದ ಈ ಕೆಲಸ ಆಗಲಿಲ್ಲ. ಎರಡನೆಯದಾಗಿ, ಕೊಂಬಾರ ಎನ್ನುವಂತಹ ಪ್ರದೇಶ ಈಗಿನ ನಮ್ಮ ಆರೋಗ್ಯ ಇಲಾಖೆಗೆ ನೆಲ್ಯಾಡಿ ಸೆಂಟರ್‌ಗೆ ಅದನ್ನು ಸೀಮಿತ ಮಾಡಿದ್ದೀರಿ. ಕೊಂಬಾರದಿಂದ ನೆಲ್ಯಾಡಿ ಸೆಂಟರ್‌ಗೆ ಸುಮಾರು 18 ಕಿಲೋಮೀಟರ್‌ದೂರ ಆಗುತ್ತದೆ. ಈ ವ್ಯಾಪ್ತಿಯಲ್ಲಿ ಯಾವುದೇ ಡಾಕ್ಟರ್ಸ್ ಅಲ್ಲಿಗೆ ಹೋಗುತ್ತಿಲ್ಲ. ಮತ್ತು ಜನರಿಗೆ ಸರ್ಕಾರಿ ಆಸ್ಪತ್ರೆಯಲ್ಲಿ ಯಾವುದೇ ರೀತಿಯ ಔಷದಿಗಳು ಇಲ್ಲ. ಸುಮಾರು 85 ಜನರು ಈ ಕಾಯಿಲೆಯಿಂದ ನರಳುತ್ತಿದ್ದಾರೆ. ಆದರೆ ಯಾವ ಕಾಯಿಲೆ ಎಂದು ಹೇಳುತ್ತಿಲ್ಲ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಗಂಭೀರವಾಗಿ ಪರಿಗಣಿಸಿ ಕ್ರಮಕ್ಕೆಗೊಳ್ಳಬೇಕು.

ಡಾ. ಹೆಚ್. ಸಿ. ಮಹದೇವಪ್ಪ (ಆರೋಗ್ಯ ಸಚಿವರು):– ಮಾನ್ಯ ಅಧ್ಯಕ್ಷರೇ, ವಿಧಾನ ಪರಿಷತ್ತಿನಲ್ಲಿ ಸಹ ಈ ಪ್ರಶ್ನೆಯನ್ನು ಮಾನ್ಯ ಸದಸ್ಯರು ಎತ್ತಿದ್ದರು. ಅಲ್ಲಿ ಉತ್ತರ ಹೇಳಿದ್ದೇನೆ. ಮಂಗನ ಕಾಯಿಲೆ ವೈರಸ್‌ನಿಂದಲೇ ಬರುವಂಥಾದ್ದು. ಈ ಕಾಯಿಲೆಗೆ ನಿರ್ದಿಷ್ಟವಾಗಿ ಔಷಧಿ ಕಂಡು ಹಿಡಿದು ಚಿಕಿತ್ಸೆ ಮಾಡುವುದಕ್ಕೆ ಇನ್ನೂ ಸಾಧ್ಯವಾಗಿಲ್ಲ. ಆದರೆ ಮಂಗನ ಕಾಯಿಲೆಯನ್ನು ತಡೆಯಲಿಕ್ಕೆ ಪ್ರಿವೆಂಟೀವ್ ಮೆಷರ್ಸ್ ಆಗಿ ಅಲ್ಲಿ ವ್ಯಾಕ್ಸೀನ್ ತಯಾರು ಮಾಡುವಂತಹ ಘಟಕ ಶಿವಮೊಗ್ಗದಲ್ಲಿ ಕೆ.ಎಫ್.ಡಿ. ಎಂದು ಇದೆ. ಕನ್ನಡಪ್ರಭಾ ಪತ್ರಿಕೆಯಲ್ಲಿ ಸಹ ವಿವರವಾದಂತಹ ವರದಿ ಕೂಡ ಬಂದಿತ್ತು ನಾನು ನೋಡಿದೆ. ವಿಧಾನ ಪರಿಷತ್ತಿನಲ್ಲಿ ಉತ್ತರ ಹೇಳುವಂತಹ ಸಂದರ್ಭದಲ್ಲಿ ಹೇಳಿದ್ದೇನೆ ನಮ್ಮ ಇಲಾಖೆಯ ಹಿರಿಯೂ ಅಧಿಕಾರಿಗಳು ಎನು ಇದ್ದಾರೆ ಅವರಿಗೆ ನಾನು ಸೂಚನೆ ಕೊಟ್ಟಿದ್ದೇನೆ ಸ್ಥಳಕ್ಕೆ ಹೋಗಿ ವ್ಯಾಪಕವಾಗಿ ಎಲ್ಲಿ ಜನ ಸಂಶಾಯಾತ್ಮಕ ರೀತಿಯಲ್ಲಿ ಈ ಜ್ವರದಿಂದ ಜನ ನರಳುತ್ತಿದ್ದಾರೆ ಅವರ ಬಗ್ಗೆ ಗಮನ ಹರಿಸಿ ಎಂದು. ವೈರಸ್ ಜ್ವರ ಬೇಕಾದಷ್ಟು ಕಾರಣಗಳಿಂದ ಬರುತ್ತದೆ. ಅದು ಮಂಗನ ಕಾಯಿಲೆಯೋ